ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) ರಾಜ್ಯದಲ್ಲಿರುವ ನೇಕಾರರ ಒಟ್ಟು ಸಾಲ ರೂ 6315 61 ಲಕ್ಷಗಳು ಸಹಕಾರ ಮತ್ತು ರಾಷ್ಟ್ರೀಕೃತ ಬ್ಯಾಂಕಿನ ಪ್ರತ್ಯೇಕ ವಿವರ ಕೆಳಕಂಡಂತಿದೆ

	(ರೂ ಲಕ್ಷಗಳಲ್ಲಿ)
1) ಸಹಕಾರ	ರೂ 3400 67
2) ರಾಷ್ಟ್ರೀಕೃತ ಬ್ಯಾಂಕ್	ರೂ 1587 10
3) ಇತರೆ	ರೂ 1327 84

(ಕೆ ಎನ್ ಎಫ್ ಸಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿ, ಮತ್ತು ಹೆಚ್ ಡಿ ಎಫ್ ಸಿ)

ಆ) ಇಲ್ಲ

ಇ) ನೇಕಾರರ ನೇಕಾರಿಕೆ ಉದ್ದೇಶಗಳಿಗಾಗಿ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಪಡೆದ ಸಾಲದ ಮೇಲಿನ ಬಡ್ಡಿ ಹಾಗೂ ದಂಡ ಬಡ್ಡಿಯನ್ನು ಮನ್ನಾ ಮಾಡುವ ಯೋಜನೆ ಇದೆ

967 (1211) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಜಮಖಂಡಿ ನಗರದಲ್ಲಿ ಒಳಾಂಗಣ ಕ್ರೀಡಾಂಗಣವನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಅದು ಈಗ ಯಾವ ಹಂತದಲ್ಲಿದೆ,

ಆ) ಈ ಕ್ರೀಡಾಂಗಣ ಅನುದಾನದ ಕೊರತೆಯಿಂದ ಸ್ಥಗಿತ-ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು,

ಈ) ಈ ತಾಲ್ಲೂಕು ದೇಶೀಯ ಆಟಗಳಾದ ಕುಸ್ತಿ, ಕಬಡ್ಡಿ, ಖೋ-ಖೋ, ಸೈಕ್ಲಿಂಗ್, ಈಜು ಈ ಎಲ್ಲಾ ಕ್ರೀಡೆಗಳಲ್ಲಿ ಹೆಸರು ವಾಸಿಯಾಗಿರುವುದರಿಂದ ಅವುಗಳಿಗೆ ಪೂರಕವಾಗುವ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಅ) ಜಮಖಂಡಿ ನಗರದಲ್ಲಿ ಒಳಾಂಗಣ ಕ್ರೀಡಾಂಗಣವು ಜೂನ್ 2002ರಂದು ಪ್ರಾರಂಭವಾಯಿತು

ಶೇಕಡಾ 10 ಬೇಸ್‌ಮೆಂಟ್ ಕಾಮಗಾರಿಯು ಮುಗಿದಿದೆ

ಆ) ಬಂದಿದೆ

ಇ) ಜಮಖಂಡಿಯಲ್ಲಿ ಒಳಾಂಗಣ ಕ್ರೀಡಾಂಗಣವನ್ನು ರೂ 55 59 ಲಕ್ಷ ಅಂದಾಜು ವೆಚ್ಚದಲ್ಲಿ ರೂ 20 00 ಲಕ್ಷ ಅನುದಾನವನ್ನು ತಾತ್ವಿಕವಾಗಿ ಮಂಜೂರು ಮಾಡಿ, ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಎಫ್ 13–7/2000 ಎನ್‌ಪಿ 1 ದಿನಾಂಕ 21–3–2001ರಂತೆ ಈ ಅನುದಾನವನ್ನು ತಾತ್ವಿಕ ಅನುಮೋದನೆಯನ್ನು ನೀಡಿದ ದಿನಾಂಕದಿಂದ 2 ವರ್ಷದೊಳಗಾಗಿ ಪಡೆದುಕೊಳ್ಳುವ ಷರತ್ತನ್ನು ವಿಧಿಸಲಾಗಿತ್ತು ಆದರೆ ಈ ಎರಡು ವರ್ಷದ ಅವಧಿಯೊಳಗಾಗಿ ಪ್ರಾಯೋಜಕರು ಕೇಂದ್ರ ಸರ್ಕಾರವು ತಿಳಿಸಿದಂತೆ ಶೇಕಡಾ 50ರಷ್ಟು ಕಾಮಗಾರಿಯನ್ನು ಮುಗಿಸಿ ತತ್‌ಸಂಬಂಧವಾಗಿ ಉಪಯೋಗಿತಾ ಪತ್ರ ಪ್ರಗತಿ ವರದಿ ಆಡಿಟೆಡ್ ಸ್ಟೇಟ್‌ಮೆಂಟ್ ಆಫ್ ಅಕೌಂಟ್ ಹಾಗೂ ಶೇ 50ರಷ್ಟು ಕೈಗೊಂಡ ಕಾಮಗಾರಿಗಳ ಯೋಜನ ಛಾಯಾ ಚಿತ್ರಗಳನ್ನು ಮೂರೈಸಲು ಸಾಧ್ಯವಾಗದ ಕಾರಣ ಕೇಂದ್ರ ಸರ್ಕಾರದ ಅನುದಾನವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ ಆದಾಗ್ಯೂ ನಿಗದಿಪಡಿಸಿದ ಅವಧಿಯನ್ನು ವಿಸ್ತರಿಸಲು ಕೋರಿ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರಕ್ಕೆ ಉತ್ತರವಾಗಿ ಕೇಂದ್ರ ಸರ್ಕಾರವು ಪತ್ರ ಸಂಖ್ಯೆ ಡಿಓಡಿವೈ ನಂ 1602/ಎನ್‌ಇಸಿವೈ/ ವೈಎಂಡ್‌ಎಸ್ 05, ದಿನಾಂಕ 16–3–2005ರಂತೆ ಕೇಂದ್ರ ಪುರಸ್ಕೃತ ಯೋಜನೆಗಳನ್ನು 1–4–2005ರಿಂದ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿರುವುದರಿಂದ ಈ ಯೋಜನೆಯನ್ನು ರಾಜ್ಯ ಸರ್ಕಾರದ ವಲಯದಲ್ಲಿ ಅನುಷ್ಠಾನಗೊಳಿಸ–ಬೇಕಾಗಿರುತ್ತದೆಂದು ತಿಳಿಸಲಾಗಿದೆ ರಾಜ್ಯ ವಲಯದ ಯೋಜನೆಯಡಿ ತಾಲ್ಲೂಕು ಕೇಂದ್ರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಯೋಜನೆ ಇರುವುದಿಲ್ಲ ಕ್ರೀಡಾಂಗಣ ನಿರ್ಮಾಣ ಯೋಜನೆಯನ್ನು 2005–06 ರಿಂದ ಜಿಲ್ಲಾ ಪಂಚಾಯತ್ ವಲಯಕ್ಕೆ ವರ್ಗಾಯಿಸಿದ್ದು, ಅಗತ್ಯ ಕ್ರಮಕ್ಕಾಗಿ ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರಿಗೆ ಸೂಚಿಸಲಾಗಿದೆ

ಈ) ಜಮಖಂಡಿಯಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ ಇಲ್ಲಿ ಅಥ್ಲೆಟಿಕ್ಸ್ ಹಾಗೂ ಇತರೆ ದೇಶೀಯ ಕ್ರೀಡೆಗಳನ್ನು ಅಭ್ಯಾಸ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ